(*b*) the extent of land that would be submerged under the said tank;

(*c*) the extent of land that will be irrigated by the said tank (Talukwise information may please be given);

(*d*) the compensation that has to be given to the lands that would be submerged;

(*e*) when the said construction work would be commenced ?

A.—Sri VEERENDRA PATIL (Chief Minister).—

(*a*) The project is under investigation.

(*b*) Does not arise in view of reply at (*a*).

(*c*) Does not arise in view of reply at (*a*).

(*d*) Does not arise in view of reply at (*a*).

(*e*) Does not arise in view of reply at (*a*).

ಶ್ರೀ ಐ. ಪುಂಡಲೀಕಪ್ಪ.—ಈ ಯೋಜನೆ ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೀರಿ, ಪರಿಶೀಲನೆ ಯಾವಾಗ ಮುಗಿಯುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಇದು 1965 ರಲ್ಲಿ ಪರಿಶೀಲನೆಗೆ ಬಂದಿದೆ. ಈಗ ರಫ್ ಎಸ್ಟಿಮೇಟ್ ಮಾಡಿದ್ದಾರೆ, ಡೀಟೈಲ್ಡ್ ಎಸ್ಟಿಮೇಟ್ ಇನ್ನೂ ಮಾಡಿಲ್ಲ.

ಶ್ರೀ ಐ. ಪುಂಡಲೀಕಪ್ಪ.—ಕುಷ್ಟಗಿ ತಾಲ್ಲೂಕಿನಲ್ಲಿ ಯಾವ ನೀರಾವರಿ ಯೋಜನೆಯೂ ಇಲ್ಲದಿರುವುದರಿಂದ ಬಹಳ ಕಷ್ಟವಾಗಿದೆ. ಈ ಒಂದು ದೊಡ್ಡ ಕೆರೆಯನ್ನು ನಾಲ್ಕನೆಯ ಯೋಜನೆಯಲ್ಲಿ ತೆಗೆದುಕೊಳ್ಳುವುದಕ್ಕೆ ಸರ್ಕಾರ ಮನಸ್ಸು ಮಾಡುತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್:—ಇದು ಚಿಕ್ಕ ನೀರಾವರಿ ಯೋಜನೆಯಲ್ಲಿ ಬರುವುದಿಲ್ಲ, ಮಧ್ಯಮ ನೀರಾವರಿ ಯೋಜನೆಯಲ್ಲಿ ಬರುತ್ತದೆ. ಈ ಯೋಜನೆಗೆ 21 ರಿಂದ 22 ಲಕ್ಷ ರೂಪಾಯಿಗಳು ಖರ್ಚು ಆಗಬಹುದೆಂದು ಸರಾಸರಿ ಅಂದಾಜು ಮಾಡಿದ್ದಾರೆ. ಯೋಜನೆಯ ಡೀಟೈಲ್ಡ್ ಎಸ್ಟಿಮೇಟ್ ತಯಾರುಮಾಡಿದ ಮೇಲೆ ತೆಗೆದುಕೊಳ್ಳಬಹುದು.

ಶ್ರೀ ಎ. ಆರ್. ಪಂಚೆಗಾವಿ.—ಈ ತಾಲ್ಲೂಕಿನಲ್ಲಿ ಪ್ರತಿವರ್ಷ ಬರಗಾಲ ಬರುತ್ತಿರುವುದರಿಂದ ಈ ವರ್ಷವೇ ಈ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ವಿಚಾರ ಮಾಡುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಬರಗಾಲ ಪ್ರದೇಶಗಳು ಬಹಳ ಕಡೆ ಇವೆ. ರಾಜ್ಯದಲ್ಲಿ ಬೇಕಾದಷ್ಟು ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಯೋಜನೆಗಳನ್ನು ತೆಗೆದುಕೊಳ್ಳಬೇಕಾದಾಗ ಹಣದ ಮುಗ್ಗಟ್ಟು ಮತ್ತು ಇತರ ಪರಿಸ್ಥಿತಿಗಳನ್ನು ನೋಡಿಕೊಂಡು ತೆಗೆದುಕೊಳ್ಳಬೇಕಾಗುತ್ತದೆ. ಈ ಯೋಜನೆಯ ಬಗ್ಗೆ ಇನ್ನೂ ಪ್ಲಾನ್ ಅಂಡ್ ಎಸ್ಟಿಮೇಟ್ ತಯಾರಾಗಿಲ್ಲ. ತಯಾರು ಮಾಡಿದ ಮೇಲೆ ಪರಿಶೀಲನೆ ಮಾಡಬೇಕಾಗುತ್ತದೆ.

1-30 P.M.

Moodabidri and Moolky as new taluk Headquarters

10. Sri K. RATNAKUMAR SHETTY (Mudabidri).—

Will the Minister for Revenue be pleased to state:—

(*a*) whether the Government have any proposal to make Moodabidri and Moolky as new Taluk Headquarters at least by the next year *i.e.*, 1969;

(*b*) if not, the reasons therefor ?

A.—Sri H. V. KOUJALGI (Minister for Revenue)—.

(*a*) No.

(*b*) Shortage of funds.

ಶ್ರೀ ಕೆ. ರತನ್‌ಕುಮಾರ್ ಶೆಟ್ಟಿ.—ಇದರಲ್ಲಿ ಹಣದ ಕೊರತೆ ಇದೆ ಎಂದು ಉತ್ತರ ಕೊಟ್ಟಿದ್ದೀರಿ. ಹಣದ ಕೊರತೆ ನೀಗಲಿಕ್ಕೆ ಎಷ್ಟು ವರ್ಷವಾಗಬಹುದು ಎಂದು ಕೇಳುತ್ತೇನೆ.

Sri H. V. KOUJALGI.—It cannot be said now.

ಶ್ರೀ ಕೆ. ರತನ್‌ಕುಮಾರ್‌ಶೆಟ್ಟಿ.—ನಮಗೆ ತಾಲ್ಲೂಕು ಬೋರ್ಡ್ ಆಗಬೇಕೆಂದು ಒಂದು ಅಭಿಪ್ರಾಯವಿದೆ. ಊರಿನ ಜನರು ವಂತಿಗೆ ಮಾಡಿಕೊಟ್ಟರೆ ಆ ರೀತಿ ಮಾಡಬಹುದೇ ಅಂತ ಕೇಳುತ್ತೇನೆ.

†ಶ್ರೀ ಎಚ್. ವಿ. ಕೌಜಲಗಿ.—ಇದು ರೆಕರಿಂಗ್ ಎಕ್ಸ್‌ಪೆಂಡೀಚರ್ ಆದ್ದರಿಂದ ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ಹಣದ ಕೊರತೆಯಿಂದ ಮಾಡಲಿಕ್ಕೆ ಆಗಿಲ್ಲ ಎಂದು ಹೇಳಿದ್ದೀರಿ. ಎಷ್ಟು ಹಣ ಬೇಕಾಗುತ್ತದೆ ಎಂದು ಎಸ್ಟಿಮೇಟ್ ಮಾಡಿದ್ದೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅನೇಕ ಕಟ್ಟಡಗಳು ಬೇಕಾಗುತ್ತವೆ, ಕಟ್ಟಡಗಳ ಹೊರತಾಗಿ ರೆಕರಿಂಗ್ ಎಕ್ಸ್‌ಪೆನ್ಸಸ್ ಪ್ರತಿವರ್ಷ 65 ಸಾವಿರ ರೂಪಾಯಿ ಆಗುತ್ತದೆ. ನಾನ್-ರೆಕರಿಂಗ್ ಎಕ್ಸ್‌ಪೆನ್ಸಸ್ ಒಂದು ಲಕ್ಷ ರೂಪಾಯಿ ಆಗುತ್ತದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯ ಹೋಬಳಿಗಳು ಹಳೇ ಮೈಸೂರಿನ ತಾಲ್ಲೂಕುಗಳಿಗಿಂತ ಎಷ್ಟೋ ದೊಡ್ಡದಾಗಿದ್ದು ಆಡಳಿತಕ್ಕೆ ತುಂಬಾ ಅವ್ಯವಸ್ಥೆಯಾಗುತ್ತಾ ಇರುವುದರಿಂದ—ಆಡಳಿತ ಅಷ್ಟು ಚೆನ್ನಾಗಿ ಮಾಡಲಿಕ್ಕೆ ಆಗುವುದಿಲ್ಲ ಒಂದೊಂದು ತಾಲ್ಲೂಕಿನಲ್ಲಿ 3 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆ ಇದೆ. ಆದ್ದರಿಂದ ಅಲ್ಲಿರತಕ್ಕ ಎರಡಾ ಹೋಬಳಿಗಳನ್ನೂ ತಾಲ್ಲೂಕಾಗಿ ಮಾಡುವುದಕ್ಕೆ ಬೇಗ ನಿರ್ಧಾರ ಕೈಕೊಳ್ಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಈ ತರಹ ಪ್ರಶ್ನೆ ಅನೇಕ ಕಡೆ ಇದೆ, ಇದೆಲ್ಲಾ ಕೂಡ ಒಮ್ಮೆಗೆ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಹಣದ ಕೊರತೆ ಇದೆ ಎಂದು ಹೇಳಿದರು. ಮೊನ್ನೆ ಮೊನ್ನೆ ಶ್ರೀಮಾನ್ ನಾಡಗೌಡರು ಬಾಗಲಕೋಟೆ ಜಿಲ್ಲೆ ತೀವ್ರ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ಗೊತ್ತಿಲ್ಲದೇ ಈ ರೀತಿ ತಾವು ಅಭಿಪ್ರಾಯ ಕೊಟ್ಟಿದ್ದೀರೋ, ಅಥವಾ ಗೊತ್ತಿದ್ದೂ ಭಿನ್ನಾಭಿಪ್ರಾಯ ವಾಗುತ್ತಾ ಇದೆಯೇ ?

(ಉತ್ತರ ಇಲ್ಲ)

ಶ್ರೀ ಬಿ. ಭಾಸ್ಕರಶೆಟ್ಟಿ.— ಹಣದ ಕೊರತೆ ಎಂದು ಹೇಳಿದರು, ನನ್ನ ತಿಳುವಳಿಕೆಯ ಮೇರೆಗೆ 1962 ನೇ ಇಸವಿಯಿಂದ ಈ ವರೆಗು ತಾಲ್ಲೂಕುಗಳಲ್ಲ, ಎಂದರೆ ನಮ್ಮ ಜಿಲ್ಲೆಯಲ್ಲಿ ಸೂಳ್ಯ ಮತ್ತು ಬಂಟವಾಳ ಈ ಕ್ಷೇತ್ರದಲ್ಲಿ, ಕಾಂಗ್ರೆಸ್‌ನವರು ಆರಿಸಿ ಬಂದರು ಅಲ್ಲಿ ತಾಲ್ಲೂಕು ಆಯಿತು, ವಿರೋಧ ಪಕ್ಷದವರು ಆರಿಸಿ ಬಂದಿರುವ ಕ್ಷೇತ್ರ ತಾಲ್ಲೂಕು ಆಗುವುದಕ್ಕೆ ಯೋಗ್ಯತೆ ಇದ್ದರೂ ಕೂಡ ಆಗಿಲ್ಲ ಎಂದು ಹೇಳಿದರೆ ಅದನ್ನು ಒಪ್ಪುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅದು ತಮ್ಮ ಅಭಿಪ್ರಾಯವಿರಬಹುದು, ಅದನ್ನು ನಾನು ಒಪ್ಪುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ರೆವಿನ್ಯೂ ಸಚಿವರು ಹಣದ ಅಭಾವದಿಂದ ಸರ್ಕಾರ ಮೂಡಬಿದ್ರೆಯನ್ನು ತಾಲ್ಲೂಕನ್ನಾಗಿ ಮಾಡಲು ಆಗುವುದಿಲ್ಲ ಎಂದು ಹೇಳಿದರು. ಆದರೆ ಇದೇ ತತ್ವ ಬಾಗಲಕೋಟೆಗೂ ಅನ್ವಯವಾಗುವುದಿಲ್ಲವೇ ಹೇಗೆ ? ಬಾಗಲಕೋಟೆ ಕ್ಷೇತ್ರದಿಂದ ಬಂದಿರುವ ಶ್ರೀಮಾನ್ ನಾಡಗೌಡರು ಅಲ್ಲಿ ಮಾಡುತ್ತೇವೆ ಎಂದು ಹೇಳುವಾಗ ಅಲ್ಲಿ ಹಣದ ಕೊರತೆ ಇಲ್ಲ, ಇಲ್ಲಿ ಹಣದ ಕೊರತೆ ಇವೆ ಎಂದು ಹೇಗೆ ಹೇಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಬಾಗಲಕೋಟೆಯಲ್ಲಿ ಈ ರೀತಿ ಮಾಡುತ್ತೇವೆ ಅಂತ ಹೇಳಿ ನದ್ಯಕ್ಕೆ ನಿರ್ಣಯ ತೆಗೆದುಕೊಂಡಿಲ್ಲ. ಈಗಲಾದರೂ ಮಾಡುವುದಿಲ್ಲ ಅಂತಲೂ ಹೇಳಿಲ್ಲ, ನದ್ಯಕ್ಕೆ ಮಾಡುವುದಿಲ್ಲ ಅಂತ ಹೇಳಿದೆ ಅಷ್ಟೆ.

ಶ್ರೀ ಎಂ. ನಾಗಪ್ಪ.—ಹಣದ ಕೊರತೆ ಇದೆ ಎಂದು ಉತ್ತರದಲ್ಲಿ ಹೇಳಿದ್ದೀರಿ, ಸ್ಕೇಟ್ ಮಿನಿಸ್ಟರ್‌ನ್ನು ಮಾಡುವುದಕ್ಕೆ 2 ಲಕ್ಷ ರೂಪಾಯಿಗಳನ್ನು ಒದಗಿಸಬೇಕೆಂದು ಮಾಡಿದ್ದೀರಿ. ಹಾಗಿರುವಾಗ ತಾಲ್ಲೂಕು ಜನತೆಯ ಹಿತದೃಷ್ಟಿಯಿಂದ 2 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ತಾವು ಏಕೆ ತಯಾರಾಗಿಲ್ಲ ?

ಶ್ರೀ ಎಚ್. ಎ. ಕೌಜಲಗಿ.—ಇದರಲ್ಲಿ ರೆಕರಿಂಗ್ ನಾನ್-ರೆಕರಿಂಗ್ ಎಕ್ಸ್‌ಪೆಂಡಿಚರ್ ಬರುತ್ತದೆ, ಮತ್ತು ಅನೇಕ ಕಟ್ಟಡಗಳ ಅವಶ್ಯಕತೆ ಇದೆ.

Sri P. V. AITHALA.—May I know whether in the entire State no new Taluk is going to be formed in 1969 ?

Sri H. V. KOUJALGI.—It is not possible to form any new Taluk before 1969 for want of funds.

Sri P. V. AITHALA.—The Hon'ble Minister was pleased to say that for paucity of funds it is not possible to form any new Taluk. May I know whether this is the policy for the entire State ?

Sri H. V. KOUJALGI.—That is the policy for the entire State.

Sri C. K. RAJAIAH SHETTY.—What is the criteria that is followed to create a new Taluk ?

Sri H. V. KOUJALGI.—Some are big and some are small places. Administrative convenience and geographical conveniences have to be taken into consideration for formation of new Taluks. For these regions, there is a proposal to reconstitute.

Sri S. SIVAPPA.—Is it the bigness or the smallness of the Taluka population or the bigness or smallness of the Congress people residing in the district that is the criteria ?

Sri H. V. KOUJALGI.—It is the administrative convenience.

Sri K. H. PATIL.—May I know the definite policy of the State Government in respect of forming Taluk headquarters and District headquarters ?

Sri H. V. KOUJALGI.—As I said earlier, for the sake of administrative convenience there is a case for readjustment for some of the Taluks. But, we will have to take a decision at a later stage, not now.

Starting of a College of Fisheries at Mangalore

11. Sri B. BHASKAR SHETTY (Kaup).—

Will the Minister of State for Fisheries and Ports be pleased to state :—

(*a*) whether there is any proposal before Government for starting a college of Fisheries at Mangalore ;

(*b*) when this college will be started ;

(*c*) the cost for establishing this new College ?